# ಹೆಚ್ಚುವರಿ ಹಿರಿಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೀದರ

**ಸಿ.ಸಿ. ನಂ.2603/2023**

**ದಿ: 13-07-2026**
**CW-1 PW-1**

ಸಾಕ್ಷಿಯ ಹೆಸರು : ವಿನೋದಕುಮಾರಿ
ಗಂಡ ಹೆಸರು : ಪ್ರಹ್ಲಾದ್
ವಯಸ್ಸು : 50 ವರ್ಷ
ಉದ್ಯೋಗ : ಶಿಕ್ಷಕಿ
ವಾಸಸ್ಥಳ : ಲಾಡಗೇರಿ, ಬೀದರ್

ಸಾಕ್ಷಿಯನ್ನು ಇಂದು ದಿ: 13-07-2026 ರಂದು ಕರೆಸಿ, ಪ್ರಮಾಣಿಕರಿಸಲಾಯಿತು.

**:-ಸಾಕ್ಷಿಯ ಮುಖ್ಯ ವಿಚಾರಣೆ ಹಿರಿಯ ಸಸಅ ಅವರಿಂದ:-**

ನನ್ನ ಗಂಡ ಚಿಟಗುಪ್ಪಾ ಸಿ.ಎಮ್.ಸಿ ಯಲ್ಲಿ ಪ್ರೋಜೆಕ್ಟ್ ಆಫೀಸರ್ ಎಂದು ಕೆಲಸ ಮಾಡುತ್ತಿದ್ದರು. ಅವರು ಪ್ರತಿ ದಿನ ತಮ್ಮ ಮೊಟರ್ ಸೈಕಲ್ ಮೇಲೆ ಬೀದರನಿಂದ ಚಿಟಗುಪ್ಪಾ ಗ್ರಾಮಕ್ಕೆ ಹೋಗುತ್ತಿದ್ದರು. ದಿ. 26-11-2020 ರಂದು ಬೆಳಗ್ಗೆ ಎಂದಿನಂತೆ ನನ್ನ ಗಂಡ ತಮ್ಮ ಮೋಟರ್ ಸೈಕಲ್ ನಂಬರ ಕೆಎ 38 ಜೆ 7774 ನೇದರ ಮೇಲೆ ಚಿಟಗುಪ್ಪಾ ಗ್ರಾಮಕ್ಕೆ ಹೋಗಿದ್ದರು. ಸಂಜೆ 6.00 ಗಂಟೆ ನಂತರ ನಾನು ಅವರಿಗೆ ಕರೆ ಮಾಡಿ ವಿಚಾರಿಸಿದಾಗ ಅವರು ತಾಳಮಡಗಿ ಗ್ರಾಮದ ಹತ್ತಿರ ಬಂದಿರುತ್ತೇನೆಂದು ತಿಳಿಸಿರುತ್ತಾರೆ. ಚಾಸಾ 6 ರವರು ಸಂಜೆ 6.30 ಗಂಟೆಯ ನಂತರ ನನಗೆ ಕರೆ ಮಾಡಿ ಅಪಘಾತದ ವಿಷಯ ತಿಳಿಸಿರುತ್ತಾರೆ. ಆಗ ನಾನು, ಚಾಸಾ 11 ಮತ್ತು 12 ರವರು ಮನ್ನಾಎಖೆಳ್ಳಿ ಆಸ್ಪತ್ರೆಗೆ ಹೋಗಿದ್ದೆವು. ಅಲ್ಲಿ ನನ್ನ ಗಂಡನಿಗೆ ಅಪಘಾತದಿಂದ ತಲೆಯ ಹಿಂಬಾಗದಲ್ಲಿ ಭಾರಿ ರಕ್ತಗಾಯ ಹಾಗೂ ಮುಖದ ಮೇಲೆ ರಕ್ತ ಗಾಯಗಳು ಆಗಿದ್ದವು ಹಾಗೂ ಅವರ ಬಲಗೈ ಮುರಿದಿತ್ತು. ನಾವು ಆಸ್ಪತ್ರೆಗೆ ಹೋದಾಗ

ನನ್ನ ಗಂಡ ಜೀವಂತ ಇರಲಿಲ್ಲ. ಬಗದಲ್ ಗ್ರಾಮದ ನಿಜಾಮುದ್ದಿನ್ ಎಂಬ 17 ವರ್ಷದ ಬಾಲಕ ತನ್ನ ಮೋಟರ್ ಸೈಕಲನ್ನು ಅತೀ ವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ಬಗದಲ್ ಬ್ರಿಡ್ಜ್ ಹತ್ತಿರ ಚಲಾಯಿಸಿಕೊಂಡು ಬಂದು ನನ್ನ ಗಂಡನ ಮೋಟರ್ ಸೈಕಲ್ ಟಕ್ಕರಕೊಟ್ಟಿರುತ್ತಾನೆಂದು ವಿಷಯ ತಿಳಿದಿರುತ್ತದೆ. ಸದರಿ ಅಪಘಾತದಲ್ಲಿ ಬಾಲಕನಿಗೆ ಗಾಯಗಳು ಆಗಿದ್ದವು ಹಾಗೂ ನನ್ನ ಗಂಡ ಮೃತಟ್ಟಿದ್ದು ಇರುತ್ತದೆ. ಸದರಿ ಬಾಲಕ ಚಲಾಯಿಸುತ್ತಿದ್ದ ಮೋಟರ್ ಸೈಕಲ್ ನಂಬರ ಕೆಎ 36 ಜೆ8015 ಇರುತ್ತದೆ. ನಂತರ ನನ್ನ ಗಂಡನ ಮೃತದೇಹದ ಶವ ಪಂಚ ಮಾಡಿರುತ್ತಾರೆ. ಆಸ್ಪತ್ರೆಯಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿಗೆ ತಾನು ನೀಡಿರುವ ದೂರಿನ ಧೃಢಿಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿ.ಪಿ 1 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ 1ಎ ಎಂದು ಗುರುತಿಸಲಾಯಿತು. ಸದರಿ ಅಪಘಾತಪಡಿಸಿದ ವಾಹನದ ಮಾಲೀಕರ ಹೆಸರು ಕಾಶಿನಾಥ ಇರುತ್ತದೆ.

<u>ಪಾಟೀ ಸವಾಲು</u>**:** <u>ಆರೋಪಿ ಪರ ಶ್ರೀ. ಎಸ್.ಎ.ಪಿ ವಕೀಲರಿಂದ :-</u>

ನನ್ನ ಗಂಡನ ಕರ್ತವ್ಯದ ಅವಧಿ ಬೆ. 10 ರಿಂದ ಸಾ. 5.30 ವರೆಗೆ ಇರುತ್ತದೆ. ಬೀದರನಿಂದ ಚಿಟಗುಪ್ಪಾ ಸುಮಾರು 40 ಕೀಮೀ ಅಂತರದಲ್ಲಿ ಇರುತ್ತದೆ. ಕೋರೋನಾ ಇರುವುದರಿಂದ ಬೀದರನಿಂದ ಪ್ರತಿದಿನ ನನ್ನ ಗಂಡ ಒಬ್ಬರೇ ಮೋಟರ್ ಸೈಕಲ್ ಮೇಲೆ ಚಿಟಗುಪ್ಪಾ ಗ್ರಾಮಕ್ಕೆ ಹೋಗುತ್ತಿದ್ದರು. ಚಾಸಾ 6 ನನ್ನ ಚಿಕ್ಕಪ್ಪಾ. ಚಾಸಾ 6 ರವರು ನನಗೆ ಸಂಜೆ 6.30-7.00 ಗಂಟೆಯ ಮಧ್ಯದಲ್ಲಿ ಕರೆ ಮಾಡಿದ್ದರು. ಸದರಿ ಅಪಘಾತವನ್ನು ನಾನು ಕಣ್ಣಾರೆಯಾಗಿ ನೋಡಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತದ ರಸ್ತೆ ರಾಷ್ಟ್ರ ಹೆದ್ದಾರಿ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ರಸ್ತೆ 100 ಅಡಿ ಅಗಲ ಇದೆ

ಏಕಕಾಲಕ್ಕೆ ಎರಡು ವಾಹನಗಳು ಎದುರುಬದಿರಿನಿಂದ ಚಲಾಯಿಸಬಹುದು ಎಂದರೆ ಸರಿ. ಅಲ್ಲಿ ಬಹಳಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಸದರಿ ವಿಷಯ ತಿಳಿದ ನಂತರ ನಾನು ಮನ್ನಾಎಖೆಳ್ಳಿ ಆಸ್ಪತ್ರೆಗೆ ಅಂದಾಜು 7.15 ಗಂಟೆಗೆ ಹೋಗಿರುತ್ತೇವೆ. ಪೋಲಿಸರು ಎಷ್ಟು ಜನರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ಸದರಿ ಅಪಘಾತಪಡಿಸಿದ ಬಾಲಕನಿಗೆ ಸದರಿ ಮೋಟರ್ ಸೈಕಲ ಯಾರದು ಎಂದು ವಿಚಾರಣೆ ಮಾಡಿರುತ್ತಾರೆ. ಆರೋಪಿ ಹಾಗೂ ಅಪಘಾತಪಡಿಸಿದ ಬಾಲಕನ ಸಮುದಾಯ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನನಗೆ ಕನ್ನಡ ಹಾಗೂ ಆಂಗ್ಲ ಭಾಷೆ ಓದಲು ಬರುತ್ತದೆ ಎಂದರೆ ಸರಿ. ಪರಿಹಾರ ಹಣ ಕೋರಿ ಇದೇ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

ಸಾಕ್ಷಿಗೆ ಸದರಿ ಅರ್ಜಿ ಧೃಢಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿ.ಡಿ 1 ಎಂದು ಗುರುತಿಸಲಾಯಿತು. ಸದರಿ ಪರಿಹಾರ ಅರ್ಜಿಯಲ್ಲಿ ಆರೋಪಿಯು ವಾಹನದ ಮಾಲೀಕ ಇರುವುದಿಲ್ಲ ಎಂದು ಪರಿಹಾರ ಅರ್ಜಿಯನ್ನುತಿದ್ದುಪಡಿ ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ವಾಹನದ ಮಾಲೀಕರ ವಿರುದ್ಧ ಪರಿಹಾರ ಅರ್ಜಿ ಸಲ್ಲಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಗೆ ಆರೋಪಿಯು ಮಾಲೀಕರು ಇರುವುದಿಲ್ಲ ಎಂದು ಸಲ್ಲಿಸಿರುತ್ತಾರೆಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಪ್ರಕಾರ ದಿ. 03-02-2015 ರಂದು ಆರೋಪಿಯು ತನ್ನ ಮೋಟರ್ ಸೈಕಲ್ ಕೆಎ 36 ಜೆ8015 ಇದನ್ನು ನರಸಿಂಗ್ ತಂದೆ ಅಂಬಾಜಿರಾವ ಇವರಿಗೆ ರೂ. 20,000/- ಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ದಾಖಲೆ ಬಗ್ಗೆ ನ್ಯಾಯಾಲಯದಲ್ಲಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನರಸಿಂಗ್ ಇವರು ಮೋಟರ್ ಸೈಕಲ ನ್ನು ಖರೀದಿ ಮಾಡಿದ ನಂತರ ಸದರಿ ಮೋಟರ್ ಸೈಕಲನಿಂದ ಯಾವುದೇ ಅಪಘಾತ ಕುರಿತು ಅಥವಾ

ಇನ್ನಿತರೆ ಯಾವುದೇ ಕೆಲಸ ಇದ್ದರು ಸಹ ಮೂಲ ಮಾಲೀಕರು ಜವಾಬ್ದಾರರು ಇರುವುದಿಲ್ಲ ಎಂದು ದಾಖಲೆಯನ್ನು ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ನಾನು ಸಲ್ಲಿಸಿರುವ ಪರಿಹಾರ ಅರ್ಜಿಯಲ್ಲಿ ಆರೋಪಿಯು ತನ್ನ ಪ್ರತಿವಾದ ಪತ್ರದಲ್ಲಿ ತಾನು ಮಾಲೀಕನಿರುವುದಿಲ್ಲ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸದರಿ ಭಾಗವನ್ನು ನಿ.ಡಿ 2 ಎಂದು ಗುರುತಿಸಲಾಯಿತು. ಪೋಲಿಸರು ನರಸಿಂಗ್ ಇವರ ವಿರುದ್ದ ಪ್ರಕರಣ ದಾಖಲು ಮಾಡುವ ಬಗ್ಗೆ ಮೂಲ ಮಾಲೀಕರ ಮೇಲೆ ಸದರಿ ಪ್ರಕರಣವನ್ನು ದಾಖಲುಮಾಡಿರುತ್ತಾರೆಂದರೆ ಸಾಕ್ಷಿಯು ನನಗೆ ಈಗ ಸದರಿ ವಿಷಯ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ. ಪೋಲಿಸರು ಸರಿಯಾಗಿ ತನಿಖೆ ಮಾಡದೆ ಆರೋಪಿ ವಿರುದ್ದ ದೋ.ಪ ಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅಪಘಾತಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ.

(ಮರು ವಿಚಾರಣೆ ಇರುವುದಿಲ್ಲ).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.
(ಡಾ. ಶ್ರೀದೇವಿ ದರಬಾರೆ)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಬೀದರ